# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಧನರಾಜ್ ವಿ.ಎಸ್. | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ ಹೆಸರು | ಃ ಲೇಟ್. ಸಿದ್ದಯ್ಯ ವಿ.ಎಸ್. | | 15.02.2020 |
| ವಯಸ್ಸು | ಃ 59 ವರ್ಷ | | |
| ವೃತ್ತಿ | ಃ ಸೆಕ್ಯೂರಿಟಿ ಏಜೆನ್ಸಿ ಮಾಲೀಕ | | ಪ್ರಾ.ಸಾ. ಃ 07 |
| ವಾಸಸ್ಥಳ | ಃ ವಿ.ವಿ.ಮೊಹಲ್ಲಾ, ಮೈಸೂರು | | ಚಾ.ಸಾ. ಃ 13 |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

. ನನ್ನ ಮನೆಯು ವಿ.ವಿ.ಮೊಹಲ್ಲಾದ *6* ನೇ ಮುಖ್ಯ ರಸ್ತೆ, ಮೈಸೂರಿನಲ್ಲಿ ಇರುತ್ತದೆ. ದಿನಾಂಕಃ *23.12.2016* ರಂದು ನಾನು ಬಾತ್ ರೂವಿನಲ್ಲಿದ್ದಾಗ ಮುಂಜಾನೆ *8.45* ರಿಂದ *9.00* ಗಂಟೆಯ ಸಮಯದಲ್ಲಿ ಅಪಘಾತವಾದ ಬಗ್ಗೆ ಒಂದು ದೊಡ್ಡ ಶಬ್ದ ಬಂತು. ನಾನು ಬಟ್ಟೆ ಹಾಕಿಕೊಂಡು ಕೌಂಪೌಂಡ್‌ನಿಂದ ಹೊರಗಡೆ ಬಂದು ನೋಡಿದಾಗ ನಮ್ಮ ಕಾಂಪೌಂಡ್ ಪಕ್ಕದಲ್ಲಿ ಬಿದ್ದಿರುವುದನ್ನು ನಾನು ನೋಡಿರುತ್ತೇನೆ. ನಾನು ಅಪಘಾತವಾಗಿರಬಹುದು ಎಂದು ಹತ್ತಿರ ಹೋಗಿ ನೋಡಿದಾಗ ಆತನು ಉಸಿರಾಡುತ್ತಿದ್ದನು. ನಾನು ಆತನಿಗೆ ನೀರು ತಂದು ಕುಡಿಸಲು ಹೋದಾಗ ಆತನ ಪಕ್ಕದಲ್ಲಿ ಕಬ್ಬಿಣದ ಆಯುಧ ಬಿದ್ದಿದ್ದನ್ನು ನೋಡಿ ನಾನು ಪೊಲೀಸ್ *100* ಸಂಖ್ಯೆಗೆ ದೂರವಾಣಿ ಕರೆ ಮಾಡಿದೆನು, ನಂತರ ಆ್ಯಂಬುಲೆನ್ಸ *108* ಗೆ ಫೋನ್ ಮಾಡಿ ಬರಲು ತಿಳಿಸಿದೆನು. ಆಸ್ಪತ್ರೆಗೆ ಸೇರಿಸೋಣ ಎಂದು ಜನರನ್ನು ಕರೆದನು ಅಷ್ಟರಲ್ಲಿ ಒಬ್ಬ ವ್ಯಕ್ತಿ ನಮ್ಮ ಚಿಕ್ಕಪ್ಪ ಎಂದು ಬಂದನು. ನಾವೆಲ್ಲರೂ ಸೇರಿ ಆ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಿದೆವು. ಸ್ಥಳದಲ್ಲಿ ನಾನು ಒಂದು ಮಚ್ಚು ಮತ್ತು ಹೆಲ್ಮೆಟನ್ನು ನೋಡಿರುತ್ತೇನೆ. ಸ್ಥಳದಲ್ಲಿ ಒಂದು ಸ್ಕೂಟರ್ ಕೂಡ ಬಿದ್ದಿತ್ತು. ನ್ಯಾಯಾಲಯದ ಮುಂದೆ ಇರುವ ಲಾಂಗು ಮಚ್ಚು ಮು.ಮಾ.*7* ನೋಡಿ ಸಾಕ್ಷಿಯು ಗುರುತಿಸಿರುವುದಿಲ್ಲ. ನಾನು ನೋಡಿದ ಮಚ್ಚು

ಇದು ಇರುವುದಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವ ಹೆಲ್ಮೆಟ್ ಮು.ಮಾ.*14* ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಸ್ಥಳದಲ್ಲಿ ನಾನು ನೋಡಿದ ವ್ಯಕ್ತಿ ದಿನಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿರುತ್ತೇನೆ. ಮೇಲೆ ಹೇಳಿದ್ದನು ಬಿಟ್ಟು ಬೇರೆ ಯಾವ ವಿಷಯವೂ ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಿ.ಪಿ.*3* ರಿಂದ *6* ಫೊಟೊದಲ್ಲಿರುವ ಸ್ಥಳ ಮತ್ತು ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

. ದಿನಾಂಕಃ **23.12.2016** ರಂದು ಬೆಳಗ್ಗೆ **10.30** ಗಂಟೆಯಲ್ಲಿ ಘಟನೆ ನಡೆದಿತ್ತು ಎಂದರೆ ನಾನು ಸಮಯವನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಸ್ಥಳದಲ್ಲಿ ನಾನು ನೋಡಿದಾಗ ಮು.ಮಾ.7 ಲಾಂಗು ಮಚ್ಚು ಸ್ಥಳದಲ್ಲಿ ಬಿದ್ದಿತ್ತು ಎಂದರೆ ವಸ್ತುವನ್ನು ನಾನು ಅಷ್ಟು ಗಮನಿಸಲಿಲ್ಲ ವ್ಯಕ್ತಿಯನ್ನು ನಾನು ಗಮನಿಸಿದೆ ಎಂದು ಹೇಳುತ್ತಾರೆ. ಸ್ಯಾಂಟ್ರೋ ಕಾರಿನಲ್ಲಿ **4** ರಿಂದ **5** ಜನರು ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತ ಮಾಡಿ ಕೆಳಕ್ಕೆ ಬೀಳಿಸಿ ನಂತರ ಮಚ್ಚುಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿರುವ ವಿಷಯ ನನಗೆ ತಿಳಿಯಿತು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿ.ಪಿ.14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-**

. ನಮ್ಮ ಮನೆಯ ಮುಖ್ಯ ಬಾಗಿಲಿನಿಂದ ಕಾಂಪೌಂಡ್ ನ ಗೇಟು 13 ರಿಂದ 14 ಅಡಿ ದೂರದಲ್ಲಿರುತ್ತದೆ. ನಮ್ಮ ಮನೆಗೆ ಒಂದು ದೊಡ್ಡ ಗೇಟು ಮತ್ತು ಒಂದು ಚಿಕ್ಕ ಗೇಟು ಇದೆ ಎರಡನ್ನೂ ಉಪಯೋಗಿಸುತ್ತೇವೆ. ನಮ್ಮ ಮನೆಯ ಮುಂದೆ 6 ಅಡಿ ಅಗಲ ಫುಟ್ ಪಾತ್ ಇದೆ ಎಂದರೆ ಸರಿ ಇದೆ. ಸದರಿ ಫುಟ್ ಪಾತ್ ರಸ್ತೆಗಿಂತ ಎತ್ತರಕ್ಕೆ ಇರುತ್ತದೆ ಎಂದರೆ ಸರಿ ಇದೆ. ಫುಟ್ ಪಾತ್ ಮೇಲೆ ಯಾವುದೇ ದ್ವಿಚಕ್ರ ವಾಹನ ಓಡಾಡುವುದಿಲ್ಲ ಶಬ್ದ ಕೇಳಿ ನಮ್ಮ ಮನೆಯ ಅಕ್ಕ-ಪಕ್ಕದವರು ಯಾರುಾ ಬಂದಿರುವುದಿಲ್ಲ, ನಮ್ಮ ಮನೆಯ ಮುಂದಿನ ರಸ್ತೆ ಜನನಿಬಿಡ ರಸ್ತೆ ಎಂದರೆ ಸರಿ ಇದೆ. ಆ ಸಮಯಕ್ಕೆ ಯಾರೂ ಬಂದಿರಲಿಲ್ಲ. ನಾನು ನೋಡಿದಾಗ ಗಾಯಗೊಂಡ ವ್ಯಕ್ತಿಯ ತಲೆಯ ಮೇಲೆ ಹಲ್ಮೆಟ್ ಇರಲಿಲ್ಲ, ಗಾಯಗೊಂಡ ವ್ಯಕ್ತಿ ನನ್ನ ಜೊತೆ ಮಾತನಾಡಿರುವುದಿಲ್ಲ. ಒಬ್ಬ ವ್ಯಕ್ತಿಯು ಗಾಯಗೊಂಡ ವ್ಯಕ್ತಿಯು ನಮ್ಮ ಚಿಕ್ಕಪ್ಪ ಎಂದು ಕೂಗಿಕೊಂಡು ಬಂದಿದ್ದನು ಆ ವ್ಯಕ್ತಿಯು ನನಗೆ ಗೊತ್ತಿರುವುದಿಲ್ಲ. ನಂತರ ಆ ವ್ಯಕ್ತಿಯನ್ನು ನಾನು ನೋಡಿರುವುದಿಲ್ಲ. ಸ್ಥಳದಲ್ಲಿ ಗಾಯಗೊಂಡು ವ್ಯಕ್ತಿಗೆ ನೀರು ಕುಡಿಸಿರುವುದಿಲ್ಲ. ನಮ್ಮ ಮನೆಯ ಗೇಟಿನಿಂದ ಸುಮಾರು 40 ಅಡಿ ದೂರದಲ್ಲಿ ಸದರಿ ವ್ಯಕ್ತಿಯು ಬಿದ್ದಿರುತ್ತಾನೆ. ನಾನು ನೋಡಿದ ಸಮಯದಿಂದ 15 ನಿಮಿಷದಲ್ಲಿ ಸದರಿ ವ್ಯಕ್ತಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಚಿಕ್ಕಪ್ಪ ಎಂದು ಕೂಗಿಕೊಂಡು ಬಂದ ವ್ಯಕ್ತಿಯು ಮಾರುತಿ ವ್ಯಾನ್ ನಲ್ಲಿ 4 ಜನರ ಜೊತೆ ಹೋಗಿದ್ದನು ಅಥವಾ ಇಲ್ಲ ಎನ್ನುವುದು ನಾನು ನೋಡಿರುವುದಿಲ್ಲ.

**<u>ಪಾಟೀ ಸವಾಲು ಃ ಆರೋಪಿ 7 ಪರ ಜೆ.ವಿ.ಆರ್, ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಜೆ.ಎಂ.ಎನ್. ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಃ ಆರೋಪಿ 9 ಪರ ಯು.ಎಸ್. ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

***ಮರು ವಿಚಾರಣೆ:- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**